**DECEMBER 2023** **U/ID 30703/ULC1A**

Time : Three hours Maximum : 75 marks

PART A — (10 × 2 = 20 marks)

ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಹತ್ತಕ್ಕೆ ಸಂಕ್ಷಿಪ್ತವಾಗಿ ಉತ್ತರಿಸಿ.

ಉತ್ತರದ ಮಿತಿ 30 ಪದಗಳು.

1. ಅರ್ಜುನನು, ತಾನು ಏಕೆ ತಪಸ್ಸು ಮಾಡುತ್ತಿದ್ದೇನೆಂದು ಇಂದ್ರನಿಗೆ ತಿಳಿಸಿದನು?

2. ಅರ್ಜುನನು, ಶಿವನ ಕೊರಳನ್ನು ತುಳಿದಾಗ ಏನಾಯಿತು?

3. ದುರ್ಯೋಧನನು ವೈಶಂಪಾಯನ ಸರೋವರವನ್ನು ಪ್ರವೇಶಿಸುವಾಗ ಅಲ್ಲಿದ್ದ ಪಕ್ಷಿಗಳು ಏನು ಹೇಳಿದವು ಎಂದು ಕವಿ ತಿಳಿಸುತ್ತಾನೆ?

4. ಅಲ್ಲಮ ಪ್ರಭು, ಗುರುವು ಶಿಷ್ಯರಿಗೆ ವಿದ್ಯೆ ಕಲಿಸುವ ಬಗ್ಗೆ ಏನು ಹೇಳುತ್ತಾನೆ?

5. ಲೋಹಿತಾಶ್ವನು ಯಾವ ಕಾರಣದಿಂದ ಕಾಡಿಗೆ ಹೋದನು?

6. ಹರಿಶ್ಚಂದ್ರನು, ಚಂದ್ರಮತಿಯ ಬಳಿ ಹೆಣವನ್ನು ಸುಡಬೇಕಾದರೆ ತನಗೆ ಏನು ಕೊಡಬೇಕೆಂದು ಹೇಳಿದನು?

7. ಅರ್ಜುನನು ಊರ್ವಶಿಯನ್ನು 'ತನ್ನ ವಂಶಕ್ಕೇ ತಾಯಿ' ಎಂದು ಹೇಳಲು ಕಾರಣವೇನು?

8. ಮಾಯೆಯ ತಂದೆ ತಾಯಿಗಳು ಯಾರು?

9. ಚಂದ್ರಹಾಸನನ್ನು ದಾದಿ ಹೇಗೆ ಸಾಕಿದಳು?

10. ಜನಪದ ಗೀತೆಗಳಲ್ಲಿ ಕಂಡು ಬರುವ ತಾಯಿಯ ವಾತ್ಸಲ್ಯ.

11. ರಾಮನು ಮುನಿಗಳ ಬಳಿ ಏನು ಕೇಳಿದನು? ಅದಕ್ಕೆ ಗೌತಮ ಮುನಿಯು ಏನು ಹೇಳಿದನು?

12. ಹಳಗನ್ನಡ ಭಾಷೆ.

PART B — ($5 \times 5 = 25$ marks)

ಕೆಳಗಿನ ಪ್ರಶ್ನೆಗಳಿಗೆ ಸಂದರ್ಭದೊಂದಿಗೆ ಮತ್ತು ಯಾರು ಯಾರಿಗೆ ಹೇಳಿದರು ಎಂದು ಉತ್ತರಿಸಿ.

ಉತ್ತರದ ಮಿತಿ 200 ಪದಗಳು.

13. 'ತ್ರಿಪುರಾರಿ ಕೇಳ್ ತ್ರಿಪುರಮಿಸುವ ನಿನ್ನನೇ ಪೋಲ್ವಂ'.

14. 'ಮೀರಿ ಸುಟ್ಟಿಯಾದೊಡೆ ನಿನಗೆ ವೀರಬಾಹುಕನಾಣೆ'.

15. 'ಏನು ಬಿಜಯಂಗೈದಿರಿತ್ತಲು ಮಾನನಿಧಿ, ಕುಳ್ಳಿರಿ!'.

16. 'ಕರುಣದಿಂ ಕಟುಕರೆದೆ ಕರಗಿದುದೆಂತೋ ಹರಿನಾಮದೇಳ್ಗೆ'.

17. 'ಸಣ್ಣವಳ ಮ್ಯಾಲ ಸವತ್ಯಾಕ'.

18. 'ಬನವಸೆಗೊಡೆಯನಾಗಿರುತಿರ್ಪನಾ ಮಮಕಾರ ಭೂಪಾಲ'.

19. 'ಪರಮ ಧಾನ್ಯದೊಳಿಬ್ಬರೇ ಇವರಿರಲಿ ಸೆರೆಯೊಳಗಾರು ತಿಂಗಳು'.

PART C — (3 × 10 = 30 marks)

ಕೆಳಗಿನವುಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

ಉತ್ತರದ ಮಿತಿ 500 ಪದಗಳು.

20. ಅರ್ಜುನ ಹಾಗೂ ಶಿವನ ನಡುವೆ ಹೋರಾಟ ನಡೆಯಲು ಕಾರಣವೇನು? ಕಡೆಯಲ್ಲಿ ಏನಾಯಿತು?

21. ಭೀಮ ಹಾಗೂ ದುರ್ಯೋಧನರು ಪರಸ್ಪರ ಏನೆಂದು ಮೂದಲಿಸಿಕೊಂಡು ಹೋರಾಡಿದರು? ಅದರ ಪರಿಣಾಮವೇನಾಯಿತು?

22. ಊರ್ವಶಿಯು ಅರ್ಜುನನಿಗೆ ಶಾಪ ನೀಡಿದ ಪ್ರಸಂಗವನ್ನು ವಿವರಿಸಿ.

23. ಗರತಿಯ ಹಾಡಿನಲ್ಲಿ ವ್ಯಕ್ತವಾಗಿರುವ ಹೆಣ್ಣಿನ ಅಭಿಪ್ರಾಯಗಳನ್ನು ಸಂಗ್ರಹಿಸಿ ಬರೆಯಿರಿ.

24. 'ಗೋವಿನ ಹಾಡು' ಕಥೆಯ ಆಶಯವೇನು? ನಿರೂಪಿಸಿ.

---